ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 6, May-Jun 2020, 82-85**
**©*IIMRD*, Mysuru**

IIMRD JOURNALS

**www.iimrd.com**

# ಗ್ರಾಮ ಪಂಚಾಯತಿಗಳಲ್ಲಿ ರಚಿಸಬೇಕಾಗಿರುವ ಸ್ಥಾಯಿ ಸಮಿತಿಗಳು ಮತ್ತು ಉಪಸಮಿತಿಗಳು: ರಚನೆ ಮತ್ತು ಪ್ರಕಾರ್ಯಗಳು

**ಡಾ. ಹೇಮಾಂಬರ ಎಚ್.ಎಸ್.***

**ಪೀಠಿಕೆ**

**"**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993**"** ತಿದ್ದುಪಡಿಯಾಗಿ 25.02.2017ರಂದು ಜಾರಿಗೆ ಬಂದಿದ್ದು ಪಂಚಾಯತಿ ರಾಜ್ ಸಂಸ್ಥೆಗಳು ಕಡ್ಡಾಯವಾಗಿ ಪ್ರತಿಯೊಂದು ಗ್ರಾಮಪಂಚಾಯತ್ ಸದಸ್ಯರುಗಳು ಚುನಾಯಿಸಿದ ಸದಸ್ಯರುಗಳನ್ನು ಒಳಗೊಂಡಿರುವ ಸ್ಥಾಯಿ ಸಮಿತಿಗಳ ರಚನೆ ಮಾಡಬೇಕಾಗಿದೆ ಎಂದು ಪ್ರಸ್ಥಾಪಿಸಲಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಸ್ಥಾಯಿ ಸಮಿತಿಗಳ ರಚನೆಯ ಉದ್ದೇಶ, ಗ್ರಾಮ ಪಂಚಾಯತಿಗಳಲ್ಲಿ ರಚನೆ ಮಾಡಬೇಕಾಗಿರುವ ವಿವಿಧ ಸ್ಥಾಯಿ ಸಮಿತಿಗಳು ಹಾಗೂ ಸ್ಥಾಯಿ ಸಮಿತಿಗಳು ನಿರ್ವಹಿಸಬೇಕಾದ ಪ್ರಕಾರ್ಯಗಳು ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ರಚಿಸಬೇಕಾದ ಉಪಸಮಿತಿಗಳು, ಉಪಸಮಿತಿಯ ವ್ಯಾಪ್ತಿ ಮತ್ತು ಕಾರ್ಯ ವಿಧಾನದ ಕುರಿತು ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಸ್ಥಾಯಿ ಸಮಿತಿಗಳ ರಚನೆಯ ಉದ್ದೇಶ**

ಸಾಮಾನ್ಯ ಸಭೆಗೆ ಪೂರಕವಾಗಿ ಬರುವ ಹಂತಗಳನ್ನು ಸ್ಥಾಯಿ ಸಮಿತಿಗಳು ಎಂದು ಕರೆಯಲಾಗುತ್ತದೆ. ಮೂರು ಹಂತಗಳ ಪಂಚಾಯತ್ ವ್ಯವಸ್ಥೆಯು (ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ, ಗ್ರಾಮ ಪಂಚಾಯತಿ) ತನ್ನ ಸಾಮಾನ್ಯ ಸಭೆಯಲ್ಲಿ ಎಲ್ಲಾ ವಿಷಯಗಳನ್ನು ವಿವರವಾಗಿ ಕೂಲಂಕುಷವಾಗಿ ಚರ್ಚಿಸಿ ವಿಷಯದ ಸಾಧಕ ಬಾಧಕಗಳ ಬಗ್ಗೆ ಯೋಚಿಸಿ ಸಮರ್ಪಕವಾದ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ತೀರ್ಮಾನ ತೆಗೆದು ಕೊಳ್ಳಬೇಕಾದ ವಿಷಯಗಳ ಬಗ್ಗೆ ಪ್ರಾರ್ಥಮಿಕ ಹಂತದಲ್ಲಿಯೇ ವಿಮರ್ಶಿಸಿ ಗುಣಾವಗುಣಗಳನ್ನು ಪಟ್ಟಿಮಾಡಿ ಸಾಮಾನ್ಯ ಸಭೆಗೆ ಸಹಕಾರಿಯಾಗಿ ಅನುಕೂಲವಾಗುವಂತೆ ಆಯಾ ವಿಷಯಗಳಲ್ಲಿ ವಿಶೇಷ ಜ್ಞಾನವುಳ್ಳ ಸದಸ್ಯರನ್ನೊಳಗೊಂಡ ಸಮಿತಿ ಹಾಗೂ ಉಪಸಮಿತಿಗಳನ್ನು ರಚಿಸಿಕೊಳ್ಳಲು **"ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993"** ಪ್ರಕರಣ 61 ಮತ್ತು 61(ಎ) ರಲ್ಲಿ ಅನುವು ಮಾಡಿಕೊಟ್ಟಿದೆ.

ಪ್ರಕರಣ 61ರ ಪ್ರಕಾರ ದಿನಾಂಕ 25.02.2016ರಿಂದ ಜಾರಿಗೆ ಬಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ಮೂರು ರೀತಿಯ ಸ್ಥಾಯಿ ಸಮಿತಿಗಳನ್ನು

---

* *ಬೋಧಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಆಡಳಿತ ತರಬೇತಿ ಸಂಸ್ಥೆ ಆವರಣ, ಮೈಸೂರು.*

ರಚಿಸಬೇಕಾಗುತ್ತದೆ. ಅವುಗಳೆಂದರೆ ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನ ಸ್ಥಾಯಿ ಸಮಿತಿ ಹಾಗು ಸಾಮಾಜಿಕ ನ್ಯಾಯ ಸಮಿತಿ.

ಸಾಮಾನ್ಯ ಸ್ಥಾಯಿ ಸಮಿತಿಯು ಮೂರರಿಂದ ಐದು ಜನ ಸದಸ್ಯರನ್ನು ಹೊಂದಿರುತ್ತದೆ. ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಗ್ರಾಮ ಪಂಚಾಯತಿ ಸದಸ್ಯರಲ್ಲದೆ ಗೊತ್ತುಪಡಿಸಿದ ಸಂಖ್ಯೆಯಲ್ಲಿ ರೈತರ ಕ್ಲಬ್, ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಕೊಅಪ್ಟ್ ಮಾಡಿಕೊಳ್ಳಬಹುದಾಗಿದೆ.

ಸಮಿತಿ ಸದಸ್ಯರ ಅವಧಿಯು 30 ತಿಂಗಳು ಅಥವ ಆತನು ಗ್ರಾಮ ಪಂಚಾಯತ್‌ನ ಸದಸ್ಯತ್ವವಿರುವವರೆಗೆ ಮುಂದುವರೆಯುತ್ತದೆ.

ಈ ಸಮಿತಿಯ ಕೆಲವು ಪ್ರಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಅವುಗಳೆಂದರೆ ಕೃಷಿ ಉತ್ಪಾದನೆ, ಪಶುಸಂಗೋಪನೆ, ಗ್ರಾಮಿಣ ಕೈಗಾರಿಕೆಗಳು, ಬಡತನ ನಿರ್ಮೂಲನ ಕಾರ್ಯಕ್ರಮ, ಶಿಕ್ಷಣ, ಲೋಕೋಪಯೋಗಿ ಕಾಮಗಾರಿಗಳು, ಸಾರ್ವಜನಿಕ ಕಾಮಗಾರಿಗಳ ಮೇಲ್ವಿಚಾರಣೆ ಹಾಗೂ ದುರ್ವಿನಿಯೋಗ, ಗ್ರಾಮ ಸಭೆಯು ಎತ್ತುವ ದೂರುಗಳ ಮೇಲೆ ಸಂಬಂಧ ತನಿಖೆ ಮಾಡುವುದು.

ಎರಡನೆಯ ಸಮಿತಿಯಾದ ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನ ಸ್ಥಾಯಿ ಸಮಿತಿಗೆ ಗ್ರಾಮಪಂಚಾಯತಿ ಅಧ್ಯಕ್ಷ ಪದನಿಮಿತ್ತ ಅಧ್ಯಕ್ಷರಾಗಿದ್ದು, ಇವರ ನೇತೃತ್ವದಲ್ಲಿ ಈ ಸಮಿತಿಯು ಹಲವಾರು ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ ಗ್ರಾಮ ಪಂಚಾಯತಿಗಳ ಹಣಕಾಸು ಆಯವ್ಯಯಗಳನ್ನು ರೂಪಿಸುವುದು, ರಾಜಸ್ವವನ್ನು ಹೆಚ್ಚಿಸುವುದಕ್ಕಾಗಿ ಪ್ರಸ್ಥಾವನೆಗಳ ಪರಿಶೀಲನೆ, ಸ್ವೀಕೃತಿ ಮತ್ತು ವೆಚ್ಚಗಳ ತಃಖ್ತೆಗಳ ಪರಿಶೀಲನೆ ಮತ್ತು ಗ್ರಾಮ ಪಂಚಾಯಿತಿಗಳ ಹಣಕಾಸಿಗೆ ಬಾಧಕವಾಗುವ ಎಲ್ಲಾ ಪ್ರಸ್ತಾವನೆಗಳನ್ನು ಪರಿಗಣಿಸುವುದು ಪ್ರಮುಖವಾಗಿರುತ್ತದೆ.

ಗ್ರಾಮ ಪಂಚಾಯಿತಿಯು ಜನಗಣತಿ ನಡೆಸಲಾದ ಸರ್ವೆಗಳು ಪಿಆರ್‌ಎಗಳು ಮತ್ತು ಗ್ರಾಮಿಣಭಿವೃದ್ಧಿಗೆ ಸಂಬಂಧಿಸಿದ ದತ್ತಾಂಶ ಮತ್ತು ರೈತರಿಗೆ ಮುಖ್ಯವಾದ ಇತರ ಮಾಹಿತಿ ಹಾಗು ಗ್ರಾಮಪಂಚಾಯತಿಯ ಯೋಜನೆಗಳನ್ನು ಮತ್ತು ಆಯ-ವ್ಯಯ ಸುಗಮಗೊಳಿಸಲು, ಸಂಬಂಧಿಸಿದ ದೂರದೃಷ್ಟಿತ್ವ ಮತ್ತು ವಾರ್ಷಿಕ ಯೋಜನೆಗಳು ಇವುಗಳನ್ನು ತಾಳೆ ನೋಡುವುದು ಮತ್ತು ಸಂಗ್ರಹಿಸುವುದು ಕೂಡ ಈ ಸಮಿತಿಯ ಪ್ರಮುಖ ಕಾರ್ಯವಾಗಿರುತ್ತದೆ.

ಮೂರನೆ ಮತ್ತು ಕೊನೆಯ ಸಮಿತಿಯೆಂದರೆ ಸಾಮಾಜಿಕ ನ್ಯಾಯ ಸಮಿತಿ. ಈ ಸಮಿತಿಯಲ್ಲಿ ಇತರ ಸದಸ್ಯರ ಜೊತೆಗೆ ಮಹಿಳಾ ಸದಸ್ಯರು ಇರಬೇಕಾದದ್ದು ಕಡ್ಡಾಯವಾಗಿರುತ್ತದೆ. ಇದಲ್ಲದೆ ಚುನಾಯಿತ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳ ಪೈಕಿ ಸದಸ್ಯರ ಸಂಖ್ಯೆ ಹೆಚ್ಚಿರುವ ಪಂಗಡದ ಒಬ್ಬ ಸದಸ್ಯರು ಇರಬೇಕಾಗಿರುತ್ತದೆ. ಅನುಸೂಚಿತ ಜಾತಿ ಅಥವ ಅನುಸೂಚಿತ ಪಂಗಡಗಳ ಚುನಾಯಿತ ಸದಸ್ಯರ ಪೈಕಿ ಒಬ್ಬರನ್ನು ಸಮಿತಿ ಅಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದು. ಮಹಿಳಾ ಮಂಡಳಿಗಳ ಸದಸ್ಯರನ್ನು ಗೊತ್ತುಪಡಿಸಿದಂತೆ ಸದಸ್ಯರಾಗಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಪ್ರತಿಬಿಂಬ
IIMRD JOURNALS
PRATIBIMBA – Multidisciplinary Kannada Research Journal of IIMRD

ಈ ಸಮಿತಿಯು ಕೂಡ ಅನೇಕ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಮತ್ತು ಇತರ ಹಿತಾಸಕ್ತಿಗಳಿಗೆ ಉತ್ತೇಜನ ನೀಡುವುದು, ಸಾಮಾಜಿಕವಾಗಿ ಅನ್ಯಾಯ ಆಗದಂತೆ ಮತ್ತು ಯಾವುದೇ ವಿಧವಾದ ಶೋಷಣೆಯಾಗದಂತೆ ಅಂತಹ ಜಾತಿಗಳು ಮತ್ತು ವರ್ಗಗಳನ್ನು ರಕ್ಷಿಸುವುದು ಪ್ರಮುಖ ಪ್ರಕಾರವಾಗಿರುತ್ತದೆ.

ಇದಲ್ಲದೆ ಮಹಿಳೆ ಮತ್ತು ಮಕ್ಕಳ ಕಲ್ಯಾಣದ ಬಗ್ಗೆಯೂ ಕೂಡ ಕಾರ್ಯ ನಿರ್ವಹಿಸುತ್ತದೆ. ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅನುವು ಮಾಡಿಕೊಟ್ಟು ಮಹಿಳಾ ಸಬಲೀಕರಣ ಮತ್ತು ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ವಿಷಯಗಳನ್ನು ಪರಮರ್ಶಿಸತಕ್ಕದ್ದು. ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಇರುವ ಮಹಿಳೆಯರಿಗೆ ಕೌಟುಂಬಿಕ ಹಿಂಸೆ ಮತ್ತು ಲೈಂಗಿಕ ಕಿರುಕುಳದಂಥ ಮುಂತಾದ ಅಪರಾಧಗಳ ವಿರುದ್ದ ರಕ್ಷಣೆ ಒದಗಿಸತಕ್ಕದ್ದು. ಮಹಿಳೆಯರಿಗೆ ಶಾಲೆಗಳಲ್ಲಿ, ಕಛೇರಿಗಳಲ್ಲಿ, ಕಾರ್ಖಾನೆ, ಆಸ್ಪತ್ರೆಗಳಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಸಾಕಷ್ಟು ಅನುಕುಲಗಳನ್ನು, ಅವರ ನಿತ್ಯ ಜೀವನದಲ್ಲಿ ಸ್ವಾತಂತ್ರ್ಯ ಮತ್ತು ಘನತೆಯನ್ನು ಖಚಿತ ಪಡಿಸಿಕೊಳ್ಳುವ ಮೂಲಕ ಪಂಚಾಯತಿಗೆ ಸಲಹೆ ನೀಡುವುದು ಕೂಡ ಈ ಸಮಿತಿಯ ಕಾರ್ಯವಾಗಿರುತ್ತದೆ.

**ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಪಸಮಿತಿಗಳು (ಪ್ರಕರಣ 61ಎ)**

ಉಪಸಮಿತಿಗಳ ರಚನೆ ಬಗ್ಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 61ರಡಿ ನಿರ್ದಿಷ್ಟಪಡಿಸಲಾದ ಉದ್ದೇಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಉದ್ದೇಶಕ್ಕಾಗಿ ಅದು ಗೊತ್ತುಪಡಿಸಬಹುದಾದಂತಹ ಸದಸ್ಯರನ್ನು ಒಳಗೊಂಡ ಒಂದು ಅಥವಾ ಒಂದಕ್ಕಿಂತ ಹೆಚ್ಚು ಉಪ ಸಮಿತಿಗಳನ್ನು ರಚಿಸಬಹುದು. ಈ ಉಪಸಮಿತಿಗಳು ಯಾವ ಉದ್ದೇಶಕ್ಕಾಗಿ ರಚನೆಯಾಗಿದೆಯೋ ಅದನ್ನು ಈಡೇರಿಸುವುದಕ್ಕೆ ಅಗತ್ಯ ಹಾಗೂ ಸೂಕ್ತವಾದ ಅಧಿಕಾರಗಳನ್ನು ಹಾಗೂ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ.

**ಉಪಸಮಿತಿಯ ವ್ಯಾಪ್ತಿ ಮತ್ತು ಕಾರ್ಯ ವಿಧಾನ**

ಗ್ರಾಮ ಪಂಚಾಯಿತಿಯು ತಾನು ಶಾಸನಬದ್ಧವಾಗಿ ಕಾರ್ಯನಿರ್ವಹಿಸಬಹುದಾದ ಯಾವುದೇ ಕಾರ್ಯವನ್ನು ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಥವಾ ಸೀಮಿತ ಪ್ರದೇಶದ ವ್ಯಾಪ್ತಿಯಲ್ಲಿ ಕೈಗೊಳಲು ಈ ಸಮಿತಿಗೆ ಸೂಚಿಸಬಹುದು. ಈ ಸಮಿತಿಯನ್ನು ಯಾವ ಉದ್ದೇಶಕ್ಕಾಗಿ ನೇಮಕ ಮಾಡಲಾಗಿದೆಯೋ ಆ ಉದ್ದೇಶವನ್ನು ಈಡೇರಿಸಲು ಅಗತ್ಯವಾದ ಅಧಿಕಾರವನ್ನು ಗ್ರಾಮ ಪಂಚಾಯಿತಿಯು ನೀಡಬೇಕು. ಈ ಕುರಿತು ಗ್ರಾಮ ಪಂಚಾಯಿತಿಯು ತನ್ನ ಸಾಮಾನ್ಯ ಸಭೆ ತೀರ್ಮಾನಿಸಬೇಕಾಗುತ್ತದೆ. ಸಮಿತಿ ಸಭೆಗಳನ್ನು ಗ್ರಾಮ ಪಂಚಾಯತ್ ಸಭೆ ನಡೆಸುವ ರೀತಿಯಲ್ಲಿ ಕಾರ್ಯವಿಧಾನದಂತೆಯೇ ನಡೆಸಬೇಕು ಸಮಿತಿಯು ಕೈಗೊಳ್ಳುವ ತಿರ್ಮಾನಗಳು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರಬೇಕಾಗಿರುತ್ತದೆ.


VOLUME 1, ISSUES 6 (MAY- JUN 2020) ISSN: 2582-2284, 82-85

ಯಾವುದೇ ಉಪಸಮಿತಿಯು ತಾನು ನಡೆಸುವ ಸಭೆಗಳಿಗೆ ತನ್ನದೇ ಆದ ನಡಾವಳಿ ಮತ್ತು ದಾಖಲೆಗಳನ್ನು ಹೊಂದಿರಬೇಕು. ಉಪಸಮಿತಿಗಳ ಎಲ್ಲಾ ಚಟುವಟಿಕೆಗಳು ಗ್ರಾಮ ಪಂಚಾಯಿತಿಯ ಚಟುವಟಿಕೆಗಳ ಭಾಗವಾಗಿದ್ದು, ಅವು ಪಂಚಾಯಿತಿಯ ಜಮಾಬಂಧಿ, ಲೆಕ್ಕ ತಪಾಸಣೆ ಹಾಗೂ ಇತರೆ ನಿಯಾಮಾವಳಿಗಳಿಗೆ ಬದ್ಧವಾಗಿರುತ್ತವೆ. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಯವರಿಗೆ ಸ್ಥಾಯಿ ಸಮಿತಿಗಳ ಮತ್ತು ಇತೆರೆ ಸಮಿತಿಗಳ ದಾಖಲೆಗಳನ್ನು ನಿರ್ವಹಿಸುವ ಹೊಣೆಗಾರಿಕೆ ಇರುತ್ತದೆ.

ಗ್ರಾಮ ಪಂಚಾಯತಿ ಮಟ್ಟದಲ್ಲಿ ಅನೇಕ ಉಪಸಮಿತಿಗಳನ್ನು ರಚಿಸಬೇಕಾಗುತ್ತದೆ ಅಥವಾ ರಚಿಸಬಹುದಾಗಿದೆ. ಅವುಗಳೆಂದರೆ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ, ಆಹಾರ ಖಾತ್ರಿ ಸಮಿತಿ, ಪಡಿತರ ಜಾಗೃತ ಸಮಿತಿ, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ/ಗ್ರಾಮ ಆರೋಗ್ಯ ಮತ್ತು ಮೇಲ್ವಿಚಾರಣಾ ಸಮಿತಿ, ಮಹಿಳೆಯರ ಮತ್ತು ಮಕ್ಕಳ ಸಾಗಾಣೆ ತಡೆಗಟ್ಟುವ ಮತ್ತು ಪುರ್ನವಸತಿ ಕಲ್ಪಿಸುವ ಸಮಿತಿ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ. (ಎಸ್.ಡಿ.ಎಂ.ಸಿ.), ಜಲಾನಯನ ಸಮಿತಿ, ಜೀವ ವೈವಿಧ್ಯನಿರ್ವಹಣಾ ಸಮಿತಿ, ವಸತಿ ಸಮಿತಿ, ಜಂಟಿ ಅರಣ್ಯ ಸಮಿತಿ, ಬಾಲಾ ವಿಕಾಸ ಸಮಿತಿ ಹಾಗು ಇತರೆ ಸಮಿತಿಗಳು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ **"ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993"**ರ ಪ್ರಕಾರ ಸ್ಥಾಯಿ ಸಮಿತಿಗಳು ಮತ್ತು ಉಪಸಮಿತಿಗಳನ್ನು ಗ್ರಾಮಪಂಚಾಯತಿಗಳು ಕಡ್ಡಾಯವಾಗಿ ರಚಿಸಬೇಕಿದ್ದು, ಅದರ ಮೂಲಕ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರ ಜೊತೆಗೆ ಬಡತನ ನಿರ್ಮೂಲನೆ, ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಗಳನ್ನು ರೂಪಿಸಿ ಸಮ ಸಮಾಜವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ. ಬೆಂಗಳೂರು.
- Mathew George. (1997). Process, problems and membership profile. Concept publishing company New Delhi. Pp.92.